[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ.18/2023

ಪ್ರಾ.ಸಾ.2 ಚಾ.ಸಾ.7

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ವೈ ಬಿ |
| ತಂದೆ ಹೆಸರು | : | ಬಸವರಾಜಪ್ಪ ವೈ |
| ವಯಸ್ಸು | : | 43 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ದೊಡ್ಡಮಲ್ಲಾಪುರ ಗ್ರಾಮ , ಚನ್ನಗಿರಿ. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ 13.07.2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 1 ರಿಂದ 3 ಯಾರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನುನಾನು ಈ ಮೊದಲು ನೊಡೀರವುದಿಲ್ಲ.

2) ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಚಾಸಾ 1 ರವರ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ 01.06.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನನ್ನ ಸಂಬಂದಿಯಾದ ಹರೀಶ್ ರವರು ಕೆಎ 17 ಎಂ ಎ 3854 ಐ 20 ಕಾರಿನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ನಾನು ಮತ್ತು ಹರೀಶ್ ರವರು ಸಂತೆಬೆನ್ನೂರಿಗೆ ಬಂದು ಪೆಟ್ರೋಲ್ ಹಾಕಿಸಿಕೊಂಡು ರಾತ್ರಿ 7.45 ಗಂಟೆ ಸಮಯಕ್ಕೆ ಊರಿಗೆ ಬರುತ್ತಿದ್ದಾಗ

ನಮ್ಮ ಗ್ರಾಮದ ಕೆಪಿ ಎಂ ಮಹೇಶ್ ರವರ ಕ್ರಷರ್ ಮುಂಭಾಗದಲ್ಲಿ ಹಾದು ಹೊಗೀರುವ ಕಾಕಾನೂರು ಸಂತೆಬೆನ್ನೂರು ರಾಜ್ಯ ಹೇದ್ದಾರಿ 76ರ ರಸ್ತೆಯ ತಿರುವಿನಲ್ಲಿ  ಹರೀಶನು ಕಾರನ್ನು ಯಾವುದೋ ವಾಹನವನ್ನು ಓವರ್ ಟೇಕ್ ಮಾಡಲು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ನಿಯಂತ್ರಣ ತಪ್ಪಿ ಕಾಕನೂರು ಗ್ರಾಮದ ವಾಸಿ ಬೈರೇಶಿ ರವರ ಕೆಎ 17 ಹೆಚ್ ಕೆ 316 ಮೊಟಾರ್ ಬೈಕ್ ಗೆ ಡಿಕ್ಕಿ ಉಂಟು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಡಿಕ್ಕಿ ರಭಸಕ್ಕೆ ಬೈಕ್ ಜಖಂ ಗೊಂಡು ಬೈಕ್ ಚಾಲಕ ಬೈರೇಶಿಗೆ ತಲೆಗೆ ಮತ್ತು ಮೈಕೈಗೆ ಪೆಟ್ಟು ಬಿದ್ದು ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಹರೀಶನಿಗೂ ಸಣ್ಣ ಪುಟ್ಟ ಗಾಯಗಳಾಯಿತು ಎಂದರೆ ಸರಿಯಲ್ಲ.  ಈ ವಿಚಾರವಾಗಿ ಚಾಸಾ 1 ರವರು ದೂರು ನೀಡಿದ ಮೇರೆಗೆ ನಾನು ದಿಃ 07.06.2022 ರಂದು ಪೊಲೀಸರ ಮುಂದೆ  "  ನಾನು -------- ಗುಣ ಮುಖರಾಗಿರುತ್ತೇವೆ " ಎಂಬ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು.

2. ಆರೋಪಿ ನನ್ನ ಸಂಬಂದಿ ಎಂದರೆ ಸರಿಯಲ್ಲ. ಆರೋಪಿ ನನಗೆ ಸಂಬಂದಿಯಾಗಿದ್ದರು ಸಹ ಸಂಬಂದಿ ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಸಂಬಂದಿಯಾಗಿರುವುದರಿಂದ ನನಗೆಲ್ಲಾ ವಿಚಾರ ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ  ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**02 ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

PW-3
[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**
**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ. 2788/2024

ಪ್ರಾ.ಸಾ.6 ಚಾ.ಸಾ.3

ಸಾಕ್ಷಿದಾರರ ಹೆಸರು : ಫೈರೋಜ್ ಖಾನ್

ತಂದೆಯ ಹೆಸರು : ಅಬ್ಬಾಸ್ ಖಾನ್
ವಯಸ್ಸು : 42 ವರ್ಷಗಳು
ಉದ್ಯೋಗ : ಕೂಲಿ ಕೆಲಸ
ವಾಸ : ಕರೆಕಟ್ಟೆ ಗ್ರಾಮ , ಚನ್ನಗಿರಿ.

ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-06-2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾ.ಸಾ.1 ನನ್ನ ಅಕ್ಕನ ಮಗಳು. ಚಾಸಾ.5 ನನ್ನ ಭಾವ , ಚಾಸಾ.3 ನನ್ನ ಅಕ್ಕ, ಚಾಸಾ. 7 ನನ್ನ ತಮ್ಮ. 1ನೇ ಆರೋಪಿ ನನ್ನ ಅಕ್ಕನ ಮಗ ಗಂಡ. 2 ಮತ್ತು 3ನೇ ಆರೋಪಿತರು ನನ್ನ ಅಕ್ಕನ ಬೀಗರು.

2) ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಚಾಸಾ.1 ಮತ್ತು ಆರೋಪಿತರು ಅನ್ಯೊನ್ಯವಾಗಿ ಇರುತ್ತಾರೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ.1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ.1 ರವರನ್ನು 1 ನೇ ಆರೋಪಿಗೆ ಕೊಟ್ಟು ನನ್ನ ಅಕ್ಕ ಮದುವೆ ಮಾಡಿರುತ್ತೇವೆ ಎಂದರೆ ಸರಿ. ಆರೋಪಿತರು ಚಾಸಾ.1 ರವರನ್ನು ಮದವೆಯಾದ ಮೂರು ತಿಂಗಳ ವರಗೆ ಚನ್ನಾಗಿ ನೋಡಿಕೊಂಡು ಆನಂತರ ಸಣ್ಣ ಪುಟ್ಟ ವಿಚಾರಕ್ಕೆ ಬೈದಾಡುತ್ತಾ ದೈಹಿಕವಾಗಿ ಮತ್ತು ಮಾನಸಿಕವಾಗಿ ನಿನಗೆ ಇನ್ನೂ ಮಕ್ಕಳಾಗಿಲ್ಲ ಎಂದು ಬೈದಾಡಿ ನಿಮ್ಮ ಮನೆಯವರ ಹತ್ತಿರ ವರದಕ್ಷಿಣ ಹಣ ಮತ್ತು ಬಂಗಾರವನ್ನು ತೆಗೆದುಕೊಂಡು ಬಾ ಎಂದು ಪ್ರತಿದಿನ ಕಿರುಕುಳ ನೀಡುತ್ತಿದ್ದರು ಎಂದೆರ ಸರಿಯಲ್ಲ. ಸದರಿ ವಿಚಾರವನ್ನು ಚಾಸಾ.1 ರವರು ನನಗೆ ಮತ್ತು ಚಾಸಾ.4, ಚಾಸಾ.5 ಮತ್ತು 7 ರ ವರಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾವು ಆರೋಪಿತರಿಗೆ ಬುದ್ದಿ ಹೇಳಿ ಪಂಚಾಯತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 24.04.2024 ರಂದು ಸಂಜೆ 6.30 ರ ಸಮಯದಲ್ಲಿ ನಾನು ಚಾಸಾ.1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾಗ ಆರೋಪಿತರು ನನಗೆ ಮತ್ತು ಚಾಸಾ.1 , 4 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ.1 ರವರು ನಿಪಿ.1 ರಂತೆ ದೂರು ನೀಡಿದ ಮೇರೆಗೆ ಪೋಲಿಸಿನವರು ನಿಪಿ.2 ರಂತೆ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ದಿನಾಂಕಃ 11.08.2024 ರಂದು " ನಾನು ------------------------------------- ನೀಡಿರುತ್ತೇನೆ " ಎಂಬ ಹೇಳಿಕೆಯನ್ನು ನೀಡಿರುತ್ತೇನೆ ಎಂ ದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು.

2. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣದಲ್ಲಿ

ರಾಜಿಯಾಗಿರುವುದರಿಂದ, ನಾವು ಈ ಪ್ರಕರಣದಲ್ಲಿ ರಾಜಿಯಾಗುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನಗೆ ನಿಪಿ.1 ಮತ್ತು ನಿಪಿ.2 ರವರ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

PW-2

[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**
**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ. 2788/2024

ಪ್ರಾ.ಸಾ.2 ಚಾ.ಸಾ.4

| | | |
|---|---|---|
| ಸಾಕ್ಷಿದಾರರ ಹೆಸರು | : | ನೂರ್ ಜಹಾನ್ ಖಾನಂ |
| ಗಂಡನ ಹೆಸರು | : | ಅಮಜ್ದ್ ಖಾನ್ |
| ವಯಸ್ಸು | : | 42 ವರ್ಷಗಳು |
| ಉದ್ಯೋಗ | : | ಗೃಹಿಣಿ |
| ವಾಸ | : | ದಾವಣಗೆರೆ, |

ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-06-2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾ.ಸಾ.1 ನನ್ನ ಮಗಳು. ಚಾಸಾ.5 ನನ್ನ ಗಂಡ. ಚಾಸಾ.6 ಮತ್ತು 7 ನನ್ನ ತಮ್ಮಂದಿರು. 1ನೇ ಆರೋಪಿ ನನ್ನ ಅಳಿಯ. 2 ಮತ್ತು 3ನೇ ಆರೋಪಿತರು ನನ್ನ ಅಳಿಯನ ತಂದೆ ತಾಯಿ.

2) ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನನ್ನ ಮಗಳು ಮತ್ತು ಅಳಿಯ ಚನ್ನಾಗಿರುತ್ತಾರೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ.1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

2. ಚಾಸಾ.1 ರವರನ್ನು 1 ನೇ ಆರೋಪಿಗೆ ಕೊಟ್ಟು ಹಾಗೂ ರೂ.1,10,000/- ನಗದು ಹಣ ಮತ್ತು ಬೆಳ್ಳಿಯ ಉಂಗುರ ಬ್ರಾಸ್ ಲೇಟ್ ನ್ನು ಕೊಟ್ಟು ಖರ್ಚು ವೆಚ್ಚಗಳನ್ನು ನೋಡಿಕೊಂಡು ಮದುವೆ ಮಾಡಿರುತ್ತೇವೆ ಎಂದರೆ ಸರಿ. ಆರೋಪಿತರು ಚಾಸಾ.1 ರವರನ್ನು ಮದವೆಯಾದ ಮೂರು ತಿಂಗಳ ವರಗೆ ಚನ್ನಾಗಿ ನೋಡಿಕೊಂಡು ಆನಂತರ ಸಣ್ಣ ಪುಟ್ಟ ವಿಚಾರಕ್ಕೆ ಬೈದಾಡುತ್ತಾ ದೈಹಿಕವಾಗಿ ಮತ್ತು ಮಾನಸಿಕವಾಗಿ ನಿನಗೆ ಇನ್ನೂ ಮಕ್ಕಳಾಗಿಲ್ಲ ಎಂದು ಬೈದಾಡಿ ನಿಮ್ಮ ಮನೆಯವರ ಹತ್ತಿರ ವರದಕ್ಷಿಣ ಹಣ ಮತ್ತು ಬಂಗಾರವನ್ನು ತೆಗೆದುಕೊಂಡು ಬಾ ಎಂದು ಪ್ರತಿದಿನ ಕಿರುಕುಳ ನೀಡುತ್ತಿದ್ದರು ಎಂದೆರ ಸರಿಯಲ್ಲ. ಸದರಿ ವಿಚಾರವನ್ನು ಚಾಸಾ.1 ರವರು ನನಗೆ ಮತ್ತು ಚಾಸಾ.5 ರಿಂದ 7 ರ ವರಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾವು ಆರೋಪಿತರಿಗೆ ಬುದ್ದಿ ಹೇಳಿ ಪಂಚಾಯಾತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 24.04.2024 ರಂದು ಸಂಜೆ 6.30 ರ ಸಮಯದಲ್ಲಿ ನಾನು ಚಾಸಾ.1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾಗ ಆರೋಪಿತರು ನನಗೆ ಮತ್ತು ಚಾಸಾ.1 , 6 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ.1 ರವರು ನಿಪಿ.1 ರಂತೆ ದೂರು ನೀಡಿದ ಮೇರೆಗೆ ಪೋಲಿಸಿನವರು ನಿಪಿ.2 ರಂತೆ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ದಿನಾಂಕಃ 11.08.2024 ರಂದು " ನಾನು ------------------------------------- ನೀಡಿರುತ್ತೇನೆ “ ಎಂಬ ಹೇಳಿಕೆಯನ್ನು ನೀಡಿರುತ್ತೇನೆ ಎಂ ದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ.12 ಎಂದು ಗುರುತಿಸಲಾಯಿತು.

2. ನಾವು ಮತ್ತು ಆರೋಪಿತರು  ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣದಲ್ಲಿ ರಾಜಿಯಾಗಿರುವುದರಿಂದ, ನಾವು ಈ ಪ್ರಕರಣದಲ್ಲಿ ರಾಜಿಯಾಗುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನಗೆ ನಿಪಿ.1 ಮತ್ತು ನಿಪಿ.2 ರವರ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ  ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**02 ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**